ಸಂಪಾದಕೀಯ ಮಂಡಳಿ
ಗೌರವ ಸಂಪಾದಕ
ಡಾ.ಬಿ.ಪಿ.ಸಂಪತ್ ಕುಮಾರ್
ಸದಸ್ಯರು
ಕಾವ್ಯಶ್ರೀ.ಕೆ
ವಿದ್ಯಾ ಎ.ಜಿ
ಭವ್ಯ
ಪ್ರೇಮ
ಮಧುರ ಎಲ್.ಭಟ್

# ಇ-ಅರಿವು

ಇದು ಅಂತರಂಗದ ಪಯಣ

ಪುಟ ವಿನ್ಯಾಸ
ಬಾಲಕೃಷ್ಣ ಆಚಾರ್ಯ
ಶಾಂತ ಕುಮಾರ್ ಡಿವಿಜಿ

ನಿರ್ವಹಣೆ :
ತೃತೀಯ ಬಿ.ಎ
ಐಚ್ಛಿಕ ಕನ್ನಡ

ಸಂಪುಟ : 05 | ಸಂಚಿಕೆ : 01 | ದಿನಾಂಕ : 23-01-2020

## ಶಿಕ್ಷಣ ಕ್ಷೇತ್ರದಲ್ಲಿ ತುಳುವಿನ ಹೆಜ್ಜೆಗುರುತು

ಯಾವುದೇ ದೇಶ ಅಭಿವೃದ್ಧಿ ಹೊಂದಲು ಶಿಕ್ಷಣವೇ ಅಸ್ತ್ರವಾಗಿದೆ. ಮಗು ತಾನಿರುವ ಸಮಾಜದಲ್ಲಿ ಹೊಂದಿಕೊಂಡು ಬಾಳಲು ಶಿಕ್ಷಣ ಅತ್ಯಗತ್ಯ. ನಮ್ಮ ದೇಶದಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ಶಿಕ್ಷಣ ವೈವಿಧ್ಯಮಯವಾದ ರೀತಿಯಲ್ಲಿ ಮೂಡಿಬಂದಿದೆ. ಸಾಂಸ್ಕೃತಿಕ ಅಂಶಗಳನ್ನು ಉಳಿಸಿ-ಬೆಳೆಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ಮಕ್ಕಳೇ ನಾಡಿನ ಸಂಪತ್ತು ಎಂದ ಸರ್ಕಾರ ಅವರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ.

ಡಾ. ರಾಧಾಕೃಷ್ಣನ್ ಅವರು ಶಿಕ್ಷಣದ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದಾರೆ "ಮಗು ಮಾನವನಾಗಿ, ನಾಗರಿಕನಾಗಿ, ಎಲ್ಲರೊಡನೆ ಸ್ನೇಹ, ಘನತೆ ಮತ್ತು ಗೌರವದಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ.

ಶಾಲೆಗಳಲ್ಲಿ ಕೇವಲ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಅಧ್ಯಯನದ ಅಧಿಕೃತ ಭಾಷೆಯಾಗಿದೆ. ಇದರೊಂದಿಗೆ ತುಳುವನ್ನು ಐಚ್ಛಿಕ ಭಾಷೆಯನ್ನಾಗಿ ಸೇರಿಸಿಕೊಂಡು ಬೋಧನೆ ಮಾಡುವುದರಿಂದ ತುಳುವಿನ ಅಭಿವೃದ್ಧಿಯಾಗುತ್ತದೆ. ತುಳು ಭಾಷೆಯು ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ. ಅಲ್ಲದೆ ಭಾರತದ ಪ್ರಾಚೀನ ಭಾಷೆಗಳಲ್ಲೊಂದು ಎಂಬ ಸ್ಥಾನವನ್ನು ಪಡೆದಿದೆ. ತುಳು ಮಾತನಾಡುವ ಪ್ರದೇಶಗಳಲ್ಲಿ ದಕ್ಷಿಣದಿಂದ ಉತ್ತರಕ್ಕೆ ಮಾತನಾಡುವ ಶೈಲಿ ಬದಲಾಗುತ್ತದೆ. ತುಳುನಾಡಿನ ವಿಸ್ತಾರವು ಕಾಸರಗೋಡಿನ ಚಂದ್ರಗಿರಿನದಿಯಿಂದ (ಈಗಿನ ಕೇರಳ ) ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರಿಗೆ ಇತ್ತು ಎಂದು ತಿಳಿಯಲಾಗಿದೆ. ಆದರೆ ಈಗಿನ ತುಳುನಾಡು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಹಾಗೂ ಕೇರಳದಲ್ಲಿರುವ ಕಾಸರಗೋಡು ಜಿಲ್ಲೆಗೆ ಸೀಮಿತವಾಗಿದ್ದರೂ, ಮಹಾರಾಷ್ಟ್ರದ ಮುಂಬೈ ಹಾಗೂ ಥಾಣೆಗಳಲ್ಲಿ ಬಹಳಷ್ಟು ತುಳುವರು ಇದ್ದಾರೆ.

೨೦೧೮-೧೯ ನೇ ಶೈಕ್ಷಣಿಕ ವರ್ಷದಿಂದ ದಕ್ಷಿಣ ಕನ್ನಡ ಮತ್ತು ಉಡುಪಿಯ ೨೦೦ ಶಾಲೆಗಳಲ್ಲಿ ತುಳುವನ್ನು ಮೂರನೇ ಐಚ್ಚಿಕ ಭಾಷೆಯಾಗಿ ಕಲಿಸಲು ಶಾಲೆಗಳನ್ನು ಪ್ರೇರೇಪಿಸಲು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ದ್ವಿಮುಖ ವಿಧಾನವನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದೆ. ಈಗ ತುಳುವನ್ನು ಆರನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಶಾಲೆಗಳಲ್ಲಿ ೧,೬೪೭ ವಿದ್ಯಾರ್ಥಿಗಳೊಂದಿಗೆ ಕಲಿಸಲಾಗುತ್ತಿದೆ. ೨೦೧೦ರ ಮಾರ್ಚ್ ೨೬ರಂದು ಆದೇಶದ ಮೂಲಕ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿನ ಶಾಲೆಗಳಿಗೆ ಆರನೇ ತರಗತಿಯಿಂದ ತುಳು ಭಾಷೆಯನ್ನು ಕಲಿಸಲು ಸರಕಾರ ಅವಕಾಶ ನೀಡಿದೆ. ಶಿಕ್ಷಣ ಸಂಸ್ಥೆಗಳಲ್ಲಿ ತುಳುವನ್ನು ಉತ್ತೇಜಿಸಲು ಮಾಡಿದ ಸತತ ಪ್ರಯತ್ನವೇ ಕೆಲವು ಕಡೆ ಫಲವನ್ನು ನೀಡಿದೆ. ಬೋಧಿಸುವ ಶಾಲೆಗಳ ಸಂಖ್ಯೆ ೨೦೧೦-೧೧ ರಲ್ಲಿ ಕೇವಲ ಒಂದು ಸಂಸ್ಥೆಯಿಂದ ಪ್ರಸ್ತುತ ೩೫ಕ್ಕೆ ಏರಿದೆ.



ಭಾಷೆಯ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಪಠ್ಯಪುಸ್ತಕಗಳು ಸ್ಥಳೀಯ ಜನಪದವನ್ನು ಒಳಗೊಂಡಿದೆ. ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ ಕರ್ನಾಡ್ ಸದಾಶಿವ ರಾವ್, ಉಡುಪಿ ರಾಮಚಂದ್ರರಾವ್, ನಟರಾದ ಲೀಲಾವತಿ, ಜಯಮಾಲಾ ಮತ್ತು ಕಲ್ಪನಾ ಅವರ ಕುರಿತು ಪಠ್ಯಪುಸ್ತಕಗಳನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಮುದ್ರಿಸುತ್ತದೆ ಮತ್ತು ಪೂರೈಸುತ್ತದೆ. ತುಳು ಬೋಧಿಸುವ ೩೫ ಶಾಲೆಗಳಲ್ಲಿ ೧೯ ಶಾಲೆಗಳು ಪುತ್ತೂರು, ಮಂಗಳೂರು ನಗರ, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ಮತ್ತು ಉಡುಪಿ ಜಿಲ್ಲೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳನ್ನು ಒಳಗೊಂಡಿದೆ. ಇದೊಂದು ಉತ್ತಮವಾದ ಬೆಳವಣಿಗೆಯಾಗಿದೆ.ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ಬರೆಯಲು ಕನ್ನಡ ಲಿಪಿಯನ್ನು ಆರಿಸಬಹುದಾಗಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಅವಕಾಶವಿದೆ.

ತುಳುವನ್ನು ಕಲಿಯುವ ಮನಸ್ಸಿರುವವರು ಅಧಿಕ ಸಂಖ್ಯೆಯಲ್ಲಿ ಇದ್ದರೂ, ಅದನ್ನು ಬೋಧನೆ ಮಾಡುವವರ ಸಂಖ್ಯೆ ಅತಿ ವಿರಳವಾಗಿದೆ. ಹಾಗಾಗಿ ರಾಜ್ಯ ಸರ್ಕಾರವು ಅರ್ಹ ತುಳು ಶಿಕ್ಷಣ ಅಧ್ಯಾಪಕರಿಗೆ ಸರಿಯಾದ ಸವಲತ್ತುಗಳನ್ನು ನೀಡುವುದರಮೂಲಕ ಶಿಕ್ಷಕರ ಸಂಖ್ಯೆಯನ್ನು ಹೆಚ್ಚು ಗೊಳಿಸಬೇಕು.

ಸ್ಥಳೀಯ ಸಂಸ್ಕೃತಿ ಮತ್ತು ತುಳುವಿನಂತ ಪ್ರಾದೇಶಿಕ ಭಾಷೆಗಳ ಸಂರಕ್ಷಣೆಯು ಸಮುದಾಯಗಳನ್ನು ಹತ್ತಿರಕ್ಕೆ ತರುತ್ತದೆ, ಶಾಂತಿ ಮತ್ತು ಸ್ಥಿರತೆಯ ಉತ್ತೇಜನಕ್ಕೆ ಸಹಕಾರಿಯಾಗುತ್ತದೆ.

– ರಾಗಿಣಿ
ತೃತೀಯ ಬಿ.ಎ

## 'ತುಳು'ವ ಹುಟ್ಟು

ಒಂದು ಪ್ರದೇಶದ ಸ್ಥಳನಾಮಗಳಲ್ಲಿ ತುಂಬಾ ಅರ್ಥಗಳು ಅಡಕವಾಗಿರುತ್ತವೆ. ಈ ಸ್ಥಳ ನಾಮಗಳು ಕಾರಣವಿಲ್ಲದೆ ಬರಲಾರವು. ಹಾಗೆಯೇ ಈ ಹೆಸರುಗಳನ್ನಿಡಲು ಅನೇಕ ಕಾರಣಗಳಿರುತ್ತವೆ. ಹೆಚ್ಚಾಗಿ ಆಯಾ ಊರಿನ ಸಾಂಸ್ಕೃತಿಕ ಹಿನ್ನೆಲೆಯನ್ನು ಆ ಊರ ಹೆಸರುಗಳು ಸೂಚಿಸುತ್ತವೆ.

ಹಳೆಯ ಹೆಸರುಗಳು ಹಲವು ವಿಧಗಳಿಂದ ಕೂಡಿರುತ್ತದೆ. ಕೆಲವೊಮ್ಮೆ ಅವುಗಳ ಅರ್ಥವನ್ನು, ಅದರಲ್ಲಿ ಅಡಕವಾಗಿರುವ ಗಂಭೀರತೆಯನ್ನು ಪ್ರಕಾಶನಕ್ಕೆ ತರುವುದು ಕಷ್ಟಕರ ಸಂಗತಿಯೇ ಆಗಿದೆ. ಅನೇಕ ವೇಳೆ ತಲೆ ತಲಾಂತರದಲ್ಲಿ ಸ್ಥಳನಾಮಗಳು ಬದಲಾವಣೆಗಳನ್ನು ಹೊಂದಿದೆ. ಕೆಲವೊಮ್ಮೆ ಮೂಲಹೆಸರುಗಳೇ ಮರೆತು ಹೋಗುವಷ್ಟರ ಮಟ್ಟಿಗೆ ಬದಲಾವಣೆ ಹೊಂದಿರುತ್ತದೆ. ಈ ಬದಲಾವಣೆಗಳು ರಾಜಕೀಯದಿಂದ, ಅನ್ಯ ಭಾಷಾ ಪ್ರಭಾವದಿಂದ, ಮನುಷ್ಯನ ಕಲ್ಪನಾ ಸಾಮರ್ಥ್ಯದಿಂದಲೂ ಉಂಟಾಗಿದ್ದಿರಬಹುದು. ಮನುಷ್ಯನ ಕಲ್ಪನಾ ಸಾಮರ್ಥ್ಯ ಕಳೆದುಕೊಂಡ ಹಾಗೆಲ್ಲಾ ಅನೇಕ ಹಳ್ಳಿಗಳ ಹೆಸರುಗಳ ಮೇಲೆ ಕಟ್ಟುಕಥೆಗಳು ಚಿಗುರಿಕೊಂಡು ಮುಂದೆ ಅವುಗಳೇ ಬೆಳೆದು ಅವುಗಳ ಹುಟ್ಟನ್ನು ಅಡಗಿಸುವಷ್ಟು ಸಾಮರ್ಥ್ಯವನ್ನು ಹೊಂದಿರುತ್ತವೆ.




"ತುಳುನಾಡು" ಎಂದು ಹೆಸರಾಗಿರುವ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉಗಮದ ಬಗ್ಗೆಯೂ ಅನೇಕ ಕಟ್ಟು ಕಥೆಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ 'ತುಳು' ಎಂಬ ಪದವು 'ತುರು' ಎಂಬ ಪದದ ಪರ್ಯಾಯ ರೂಪವಾಗಿದೆ, ಎನ್ನುವ ಸತ್ಯವನ್ನು ಕೆಲವು ಸಂಶೋಧನಾಕಾರರು ಬಿಚ್ಚಿಟ್ಟಿದ್ದಾರೆ. ತುರು ಎಂದರೆ ದನ, ಗೋವು ಎಂಬ ಅರ್ಥದಲ್ಲಿ ಈ ಅಭಿಪ್ರಾಯಪಡಲಾಗಿದೆ. ಕಾಲಾನುಗತಿಯಿಂದ 'ರು' ಎಂಬ ಅಕ್ಷರವು 'ಳು' ಎಂದು ಉಂಟಾಗಿರಬಹುದು ಎಂಬ ಅಭಿಪ್ರಾಯಪಡಲಾಗಿದೆ. ತುರುಗಳೇ ಪ್ರಧಾನವಾದ ನಾಡು ತುರುನಾಡು ಅದೇ ತುಳುನಾಡು ಎಂಬುದಾಗಿ ಅಭಿಪ್ರಾಯಪಡಲಾಗಿದೆ. ತುರುಗಳನ್ನು ಸಾಕುವವರು, ಅವುಗಳನ್ನು ಹೊಂದಿದವರು ತುರುವರು. ಅವರೇ ತುಳುವರು. ತುರುವರ ನಾಡು ತುಳುನಾಡಾಯ್ತು. ಈ ತುರುಕಾರರು ಗೋವಳರು, ಗೋಪಾಲ ವೃತ್ತಿಯನ್ನು ಅವಲಂಬಿಸಿದವರು. ಈ ತುಳುವರು ಬಹಳ ಪ್ರಾಚೀನ ಕಾಲದ ಜನಪ್ರಭೇದ, ಚಂದ್ರವಂಶಕ್ಕೆ ಸೇರಿದವರೆಂದು ಹೇಳಿಕೊಂಡಿದ್ದರು. ಆ ಕಾಲದಲ್ಲಿ ಹೈನುಗಾರಿಕೆಯೇ ಪ್ರಧಾನವಾದ ಉದ್ಯೋಗವನ್ನು ಹೊಂದಿದ್ದ ತುರುವರು ಒಕ್ಕಲುತನಕ್ಕೆ ಮಾರ್ಪಾಡಾದರೆಂದು, ಆದರೆ ಅವರಿಂದ ಪಡೆದ ಈ ನಾಡಿನ ಹೆಸರು ಅಳಿಯದೆ ಇಂದಿಗೂ ಉಳಿದು ಬಂತು ಎಂಬುದರ ನಿಷ್ಕರ್ಷೆಮಾಡಲಾಗಿದ್ದು 'ತುರು' ಎಂಬ ಶಬ್ದವೇ 'ತುಳು' ಎಂದು ರೂಪಾಂತರ ಹೊಂದುವುದು ಭಾಷಾಶಾಸ್ತ್ರಕ್ಕೂ ಸಮ್ಮತವೇ ಎಂಬುದನ್ನು ಅಲ್ಲಗಳೆಯುವಂತಿಲ್ಲ ಎಂಬುದು ಸಂಶೋಧನಾಕಾರರ ಅಭಿಪ್ರಾಯವಾಗಿದೆ. ಹೀಗೆ ಪ್ರತಿಯೊಂದು ಭಾಷೆಯೂ ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ. ಆದರೆ ಈ ಇತಿಹಾಸ ನೈಜತೆಯೂ ಆಗಿರಬಹುದು ಅಥವಾ ಪ್ರತಿಯೊಬ್ಬರ ಆಲೋಚನೆಗೆ ಬಿಟ್ಟದ್ದೂ ಆಗಿರಬಹುದು.

– ಭವ್ಯಾ
ತೃತೀಯ ಬಿ.ಎ

## ತುಳುನಾಡಿನ ಜನಪದ ಆಟಗಳು

ತುಳುನಾಡು ಎಂಬುದು ಪ್ರಾದೇಶಿಕ ವ್ಯಾಪ್ತಿಯಲ್ಲಿ ಚಿಕ್ಕದಾಗಿದ್ದರೂ ಸಹ, ಸಮಾಜದ ಅನೇಕ ರಂಗಗಳಲ್ಲಿ ನೀಡಿರುವ ಕೊಡುಗೆ ಅವಿಸ್ಮರಣೀಯ. ಆದರೆ ಒಂದು ಸಮಯದಲ್ಲಿ ಶ್ರೀಮಂತವಾಗಿದ್ದ ಹಾಗೂ ವೈಭವಯುತವಾಗಿದ್ದ ಅನೇಕ ಸಂಸ್ಕೃತಿ, ಆಚರಣೆ, ಆಟಗಳು ಇಂದು ಇತಿಹಾಸದ ಪುಟಗಳಿಗಷ್ಟೇ ಸೀಮಿತವಾಗಿದೆ. ಪ್ರಸ್ತುತ ಈ ಲೇಖನವು ತುಳುನಾಡಿನಲ್ಲಿ ಈಗಲೂ ಆಚರಣೆಯಲ್ಲಿರುವ ಕೆಲವೊಂದು ಆಟಗಳ ಬಗ್ಗೆ ಬೆಳಕು ಚೆಲ್ಲಿದೆ **೧.ಚೆನ್ನೆಮಣೆ:** ಇದು ತುಳುನಾಡಿನ ಪ್ರಸಿದ್ಧವಾದ ಆಟಗಳಲ್ಲಿ ಒಂದಾಗಿದೆ. ಈ ಆಟವನ್ನು ಆಷಾಡ ಮಾಸದಲ್ಲಿ ಆಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಕತೆಯ ಐತಿಹ್ಯವೂ ಇದೆ.



ಸತ್ಯಾನಪುರದ ತಾಣದ ಒಬ್ಬ ವ್ಯಕ್ತಿಗೆ ಮಕ್ಕಳಿರಲಿಲ್ಲ. ಅವರು ಯಾವಾಗಲೂ ಕಣ್ಣೀರಿಡುತ್ತಿದ್ದರು. ಹಾಗೂ ಮಗುವಿಗಾಗಿ ಹಪಹಪಿಸುತ್ತಿದ್ದರು. ನಂತರ ಅವರಿಗೊಂದು ಮಗು ಹುಟ್ಟಿ ಸಿರಿ ಎಂಬ ನಾಮವನ್ನಿಟ್ಟು ಚೆನ್ನಾಗಿ ಸಾಕಿದರು. ಸಿರಿಗೆ ಮದುವೆ ಆದ ನಂತರ ಅಬ್ಬಗ, ದಾರಗ ಎಂಬ ಮಕ್ಕಳ ಜನನವಾಯಿತು. ಒಂದು ದಿನ ಅಬ್ಬಗ ಹಾಗೂ ದಾರಗ ಇಬ್ಬರೂ ಒಬ್ಬ ಅಜ್ಜನ ಸಲಹೆಯಂತೆ ಮನೆಯಲ್ಲಿ ಚೆನ್ನಮಣೆ ಆಡುತ್ತಿರುವಾಗ, ಇಬ್ಬರೂ ಆಟದಲ್ಲಿ ಪರಸ್ಪರ ಜಗಳ ಮಾಡಿ ಅಬ್ಬಗ ಕೋಪದಿಂದ ದಾರಗಳಿಗೆ ಹೊಡೆದಳು. ಬಿದ್ದ ಹೊಡೆತಕ್ಕೆ ದಾರಗ ತೀರಿದಳು. ಇದನ್ನು ನೋಡಿ ಹೆದರಿದ ಅಬ್ಬಗ ದಾರಗಳ ಶವವನ್ನು ಬಾವಿಗೆ ನೂಕಿ, ತಾನೂ ಹಾರಿ ಪ್ರಾಣಬಿಟ್ಟಳು. ಅವರಿಗೆ ಚೆನ್ನಮಣೆ ಆಡಲು ಸಲಹೆ ನೀಡಿದ್ದ, ಆ ಅಜ್ಜ ಮಾಯವಾಗಿದ್ದ. ಇದನ್ನೆಲ್ಲ ವಿಮರ್ಶಿಸಿದಾಗ, ಅಬ್ಬಗ, ದಾರಗರ ತಾಯಿಯಾಗಿದ್ದ ಸಿರಿ ಹುಟ್ಟಿದ ಸಂದರ್ಭದಲ್ಲಿ ನೀಡಬೇಕಿದ್ದ ಹರಕೆಯನ್ನು ಮರೆತಿರುವುದೇ ಇದಕ್ಕೆ ಕಾರಣವೆಂದು ತಿಳಿಯುತ್ತದೆ. ಈ ಕತೆಯ ನಂತರ, ಇಂದಿನ ದಿನದವರೆಗೂ ಚೆನ್ನಮಣೆಯನ್ನು ಅಕ್ಕ-ತಂಗಿ, ಅಣ್ಣ-ತಮ್ಮ, ಗಂಡ-ಹೆಂಡತಿ ಆಡಬಾರದೆಂಬ ನಿಯಮವನ್ನು ಮುಂದುವರೆಸುತ್ತಾ ಬಂದಿದ್ದಾರೆ.

**೨ ಕಂಬಳ:** ಇದನ್ನು ತುಳುನಾಡಿನ ಹೆಮ್ಮೆ, ಶೌರ್ಯದ ಪ್ರತೀಕವಾಗಿರುವ ಆಟವೆಂದೇ ಕರೆಯಲಾಗುತ್ತದೆ. ಇಂದೂ ಕೂಡ ತುಳುನಾಡಿನ ನಾನಾ ಕಡೆಗಳಲ್ಲಿ ಅತೀ ವಿಜೃಂಭಣೆಯಿಂದ ಕಂಬಳವನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವುದನ್ನು ಕಂಬಳ ಎನ್ನಬಹುದು. ಕಂಬಳದಲ್ಲಿ ಕೋಣ ಅಥವಾ ಎತ್ತುಗಳ ಜೋಡಿಯ ಜೊತೆಗೆ ಓಡುವವರು ಬಲಿಷ್ಠವಾಗಿಯು, ನಿಪುಣರಾಗಿಯು ಇರಬೇಕು. ಪ್ರಾಚೀನ ಪದ್ಧತಿಯಂತೆ ಕಂಬಳವನ್ನು ಮುಖ್ಯವಾಗಿ ನಾಲ್ಕು ವಿಧಗಳನ್ನಾಗಿ ವಿಂಗಡಿಸಬಹುದು.

**೩.ಕೋಳಿ ಅಂಕ:** ಈ ಆಟವು ತುಳುನಾಡಿನಲ್ಲಿ ಇರುವವರುಗೆಲ್ಲಾ ಚಿರಪರಿಚಿತವಾಗಿರುವ ಆಟವಾಗಿದೆ. ತುಳುನಾಡಿನಲ್ಲಿ ಕೋಳಿಕಟ್ಟವನ್ನು ಮೂರು ಸಂದರ್ಭದಲ್ಲಿ ಕಾಣಬಹುದಾಗಿದೆ. ಅವುಗಳೆಂದರೆ ಜಾತ್ರೆ ಕಟ್ಟ, ನಿತ್ಯ ಕಟ್ಟ ಹಾಗೂ ಸವಾಲಿನ ಕಟ್ಟ. ಕೋಳಿಕಟ್ಟದಲ್ಲಿ ಎರಡೂ ಕೋಳಿಗಳ ಜಾತಿ ಪ್ರಧಾನ ಪಾತ್ರವಹಿಸುತ್ತದೆ. ಕೋಳಿಗಳ ಬಣ್ಣದ ಮೇಲೂ ಅದರ ಶೌರ್ಯವನ್ನು ಅಳೆಯಲಾಗುತ್ತದೆ. ತುಳುನಾಡಿನಲ್ಲಿ ಸುಮಾರು ೧೪ ಬಗೆಯ ಬಣ್ಣಗಳ [ಜಾತಿಯ] ಕೋಳಿಗಳು ಕಾಣಸಿಗುತ್ತದೆ. ಕೋಳಿ ಕಾದಾಡುವ ಕ್ರಿಯೆಯನ್ನು "ಕೋರಿ ಮೊಟ್ಟುನ" ಎನ್ನುತ್ತಾರೆ. ಸಾಮಾನ್ಯವಾಗಿ ಮೂರು ಸುತ್ತಿನಲ್ಲಿ ಕೋಳಿ ಕಾಳಗ ನಡೆಯುತ್ತದೆ. ತುಳುನಾಡಿನಲ್ಲಿ ಹುಟ್ಟಿಕೊಂಡ ಈ ಆಟವು ಇಂದು ದೇಶ-ವಿದೇಶದಲ್ಲೂ ಬಹಳಷ್ಟು ಜನಪ್ರಿಯತೆಯನ್ನು ಗಳಿಸಿಕೊಂಡಿದೆ.

ತುಳುನಾಡಿನ ಎಲ್ಲಾ ಆಟಗಳು ಸಾಮಾನ್ಯವಾಗಿ ಸಾಮಾಜಿಕ, ಹಾಗೂ ನ್ಯಾಯಯುತವಾದ ಚೌಕಟ್ಟಿನೊಳಗೆ ರೂಪಿಸಲಾಗಿದ್ದು, ಇಂದಿನ ಜನಾಂಗವೂ ಅದರ ಮೂಲ ಉದ್ದೇಶವನ್ನು ನೆನಪಿಟ್ಟುಕೊಂಡು ಜೀವನ ಹಾಳು ಮಾಡುವ ಆಟವೆಂಬಂತಹ ಸ್ವರೂಪವನ್ನು ನೀಡಿದೆ. ಕೇವಲ ಮನೊರಂಜನೆಗಾಗಿ ಮಾತ್ರ ಆಡಬೇಕು. ಹಾಗೂ ಅದನ್ನು ಅದೆ ರೀತಿಯಾಗಿ ಮುಂದಿನ ಪೀಳಿಗೆಯವರಿಗೆ ಒಪ್ಪಿಸಬೇಕು.

ದೀಕ್ಷಿತ್
– ದ್ವಿತಿಯ ಬಿ.ಎ

## ಸಂಪಾದಕೀಯ

ಕನ್ನಡ ವಿಭಾಗದ ಆಶ್ರಯದಲ್ಲಿ ಹೊರಬರುತ್ತಿರುವ 'ಇ-ಅರಿವು' ಪತ್ರಿಕೆ ಈಗ ನಿಮ್ಮ ಕೈಯಲ್ಲಿ ಇದೆ. ತೃತೀಯ ಕನ್ನಡ ಐಚ್ಛಿಕ ವಿಭಾಗದ ವಿದ್ಯಾರ್ಥಿಗಳು ಇದರ ಹೊಣೆಹೊತ್ತಿದ್ದಾರೆ. ಇದು ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಗೆ ಅಡಿಪಾಯ. "ತುಳುವೆರೆ ಪಾರಂಪರಿಕ ಜ್ಞಾನ"ವೆಂಬ ರಾಷ್ಟ್ರೀಯ ವಿಚಾರ ಸಂಕಿರಣ ಸಂದರ್ಭದಲ್ಲಿ ಈ ಸಂಚಿಕೆ ಹೊರಬರುತ್ತಿರುವುದು ಅರ್ಥಪೂರ್ಣ ಕೆಲಸವಾಗಿದೆ.

ತುಳುನಾಡು ಎಷ್ಟು ಪ್ರಾಚೀನವೂ ಅಷ್ಟೇ ದೈವ ಭಕ್ತಿಯನ್ನು ಹೊಂದಿರುವ ನಾಡಗಿದೆ. ತುಳುನಾಡ ಪ್ರತ್ಯೇಕತೆಯ ಬಗೆಗೆ ವಾದ-ವಿವಾದಗಳು ನಡೆಯುತ್ತಿದೆ. ತುಳುನಾಡು ವಿಸ್ತಾರದಲ್ಲಿ ಚಿಕ್ಕದಾದರು ಸಂಸ್ಕೃತಿಯಲ್ಲಿ ಶ್ರೀಮಂತಿಕೆಯನ್ನು ಹೊಂದಿರುವ ನಾಡು ತುಳುನಾಡು. ಬೌದ್ಧಿಕವಾಗಿ ಈ ತುಳುವರು ನಡೆಸಿರುವ ಆಲೋಚನೆಗಳು ವಾಸ್ತವ ಲೋಕದ ಬೇರೆ ಬೇರೆ ವಸ್ತುಘಟಕಗಳ ಕುರಿತಂತೆ ಅವರು ಹೊಂದಿರುವ ಭಾವನೆಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದೇವೆ.

ವಿದ್ಯಾರ್ಥಿಗಳ ಕಲಿಕೆ ಕೇವಲ ತರಗತಿಗಳ ನಾಲ್ಕು ಗೋಡೆಗಳ ಮಧ್ಯೆ ಮಾತ್ರ ಸೀಮಿತವಾಗಿರಬಾರದು. ಚರ್ಚೆ, ಸಂವಾದ, ವಾಗ್ವಾದಗಳನ್ನು ಹುಟ್ಟುಹಾಕಬಲ್ಲ ವಿಚಾರ ಸಂಕಿರಣ, ಕಮ್ಮಟ ಮೊದಲಾದವುಗಳಲ್ಲಿ ಭಾಗವಹಿಸುವ ಮೂಲಕ ಅವರು ತಮ್ಮ ಅನುಭವಗಳನ್ನು ಶ್ರೀಮಂತಗೊಳಿಸಿಕೊಳ್ಳಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಗಳಲ್ಲಿ ಭಾಗವಹಿಸಿ, ತಮ್ಮ ಪ್ರತಿಭೆಯನ್ನು ಪ್ರತಿಬಿಂಬಿಸಬೇಕು.

ಕನ್ನಡ ವಿಭಾಗ ಒಂದಲ್ಲೊಂದು ಕ್ರಿಯಾಶೀಲ ಹಾಗೂ ವಿದ್ಯಾರ್ಥಿ ಸ್ನೇಹಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕಾಲೇಜಿನಲ್ಲಿ ಖ್ಯಾತಿಯನ್ನು ಪಡೆದುಕೊಂಡಿದೆ. ಈ ಸಮಯದಲ್ಲಿ ಸಹೃದಯರಾದ ಓದುಗರಿಗೂ, ಸಹಾಯ ಹಸ್ತ ಚಾಚಿದ ಪ್ರತಿಯೊಬ್ಬರಿಗೂ ತುಂಬು ಹೃದಯದ ಧನ್ಯವಾದಗಳು. ನಮ್ಮ ಪ್ರತೀ ಹೆಜ್ಜೆಯಲ್ಲೂ ಜೊತೆಯಾಗಿ ಈ ಪತ್ರಿಕೆ ಹೊರಬರಲು ಸಹಕರಿಸಿದ ಪ್ರತಿಯೊಬ್ಬ-ರಿಗೂ ಈ ಸಮಯದಲ್ಲಿ ಸಂಪಾದಕೀಯ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಓದುಗರ ಸಲಹೆ, ಅಭಿಪ್ರಾಯ, ಸೂಚನೆಗಳನ್ನು ಬಯಸುತ್ತೇವೆ.

## ತುಳುನಾಡಿನ ಆಹಾರ ವೈವಿಧ್ಯತೆ

ದಕ್ಷಿಣ ಕನ್ನಡ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಹಲವಾರು ವಿಚಾರಗಳಲ್ಲಿ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ. ಊಟ ಉಪಚಾರದಲ್ಲಂತೂ ನೆನೆದರೆ ಸಾಕು ಬಾಯಲ್ಲಿ ನೀರೂರಿಸುವಂತಹ ವಿವಿಧ ಬಗೆಯ ತಿಂಡಿ ತಿನಿಸು ಖಾದ್ಯಗಳಿಂದ ಹೆಸರುವಾಸಿಯಾಗಿದೆ. ಇಲ್ಲಿಯ ಪ್ರಸಿದ್ಧ ತುಳುವ ಭಕ್ಷ್ಯಗಳಲ್ಲಿ ನೀರು ದೋಸೆ, ಮಸಾಲ ದೋಸೆ, ಪತ್ರೊಡೆ, ವಿವಿಧ ಬಗೆಯ ಕಡುಬು, ಗೋಲಿಬಜೆ, ಬನ್ಸ್,



ಕೋರಿ ರೊಟ್ಟಿ, ಇಂತಹ ಹಲವಾರು ತಿನಿಸುಗಳಿವೆ.

ಒಂದಾನೊಂದು ಕಾಲದಲ್ಲಿ ಉಡುಪಿಯ ದೇವಾಲಯದ ಬೀದಿಗಳಲ್ಲಿ ವಿನಮ್ರ ಭಕ್ಷ್ಯವಾಗಿ ಪರಿಚಯಿಸಲ್ಪಟ್ಟ ಮಸಾಲ ದೋಸೆಯು ಈಗ ಸಂಪೂರ್ಣ ದಕ್ಷಿಣ ಭಾರತ ದಲ್ಲಿ 'ಅಂತರರಾಷ್ಟ್ರೀಯ ಪ್ರಸಿದ್ಧಿ' ಮತ್ತು ಆಕ್ಸ್‌ಫರ್ಡ್ ನಿಘಂಟುಗಳಲ್ಲಿ ಸ್ಥಾನ ಪಡೆದಿದೆ ಎಂದರೆ ಇದು ದಕ್ಷಿಣ ಕನ್ನಡ ಮತ್ತು ಉಡುಪಿ ತುಳು ಜಿಲ್ಲೆಗಳಲ್ಲಿ ತಯಾರಿಸಿದ ಭಕ್ಷ್ಯಗಳ ಜನಪ್ರಿಯತೆಯ ಸೂಚಕವಾಗಿದೆ. ಹೀಗೆ ತಯಾರಾಗಿರುವ ತುಳುವ ತಿನಿಸುಗಳು ಇಂದು ದೇಶ-ವಿದೇಶಗಳಲ್ಲಿ ಜನಪ್ರಿಯತೆಯನ್ನು ಹೊಂದಿದೆ. ಇಂತಹ ಆಹಾರಗಳು ಹವಾಮಾನ ಮತ್ತು ತಾಪಮಾನಗಳಿಗೆ ಅನುಗುಣವಾಗಿ ವೈಜ್ಞಾನಿಕ ಆಧಾರಗಳನ್ನು ಹೊಂದಿದ್ದು, ಯಾವ ಕಾಲಕ್ಕೆ ಯಾವ ತಿನಿಸುಗಳನ್ನು ಸೇವಿಸಬೇಕು, ಅದರಿಂದ ನಮ್ಮ ದೇಹಕ್ಕೆ ಆಗುವ ಹಲವಾರು ಪ್ರಯೋಜನಗಳನ್ನು ಇಲ್ಲಿಯ ಜನರು ಅರಿತಿರುತ್ತಾರೆ.

ಬೇಸಿಗೆಯಲ್ಲಿ ಮಾವು, ಹಲಸಿನಹಣ್ಣು ಹೇರಳವಾಗಿ ದೊರೆಯುತ್ತದೆ. ಆದ್ದರಿಂದ ಈ ಹಣ್ಣುಗಳನ್ನೇ ಬಳಸಿಕೊಂಡು ರುಚಿಕರವಾದ ಖಾದ್ಯಗಳನ್ನು ತಯಾರಿಸುವುದು ಸರ್ವೇಸಾಮಾನ್ಯವಾಗಿರುತ್ತದೆ. ಚಿಪ್ಸ್, ಪಲ್ಯ, ದೋಸೆ, ಕಡುಬು, ಸಾಂಬಾರ್, ಪಾಯಸ, ಪಾಪಡ್, ಸಂಡಿಗೆ ಇತ್ಯಾದಿಗಳನ್ನು ಸಾಂಪ್ರದಾಯಿಕ ವಿಧಾನಗಳಲ್ಲಿ ಹಲಸಿನಹಣ್ಣಿನಿಂದ ತಯಾರಿಸುತ್ತಾರೆ. ಈ ತಿನಿಸುಗಳು ಆಯಾ ಕಾಲಗಳಿಗೆ (ಅವುಗಳು ಬೆಳೆಯುವ ಕಾಲ) ಮಾತ್ರ ಸೀಮಿತವಾಗಿರುತ್ತದೆ. ಈ ಆಹಾರಗಳು ಆರೋಗ್ಯಕರ ಮತ್ತು ಪರಿಸರೀಯವಾಗಿರುತ್ತದೆ. ಇನ್ನೂ ಕೆಲವು ಆಹಾರ ತಿನಿಸುಗಳನ್ನು ಬಾಳೆ ಎಲೆಗಳಲ್ಲಿ, ಹಲಸಿನ ಎಲೆ, ಅರಶಿನದ ಎಲೆಗಳನ್ನು ಬಳಸಿ ತಯಾರಿಸಲಾಗುತ್ತದೆ. ಇದು ಆರೋಗ್ಯಕರವೂ ಪರಿಸರ ಸ್ನೇಹಿಯೂ ಆಗಿದೆ.

– ಭವ್ಯಾ
ತೃತೀಯ ಬಿ.ಎ

## ಓ ದೇಶವೀರ ನಿನಗಿದೋ ಸಲಾಂ

ಓ ದೇಶದ ವೀರ
ನೀ ಭಾರತ ಮಾತೆಯ ಕುವರ
ನೀನೇ ಈ ದೇಶದ ಕಣ್ಮಣಿ
ನಿನಗಾಗಿ ಮಿಡಿಯುತ್ತಿದೆ ಹೃದಯದ ಕಂಬನಿ ....

ದೇಶಕ್ಕಾಗಿ ಹೋರಾಡುವೆ ನೀನು
ದೇಶದ ಗಡಿ ಕಾಯುವೆ ನೀನು
ನಮ್ಮೆಲ್ಲರ ಹೃದಯದಲಿ ನೆಲೆಸಿರುವೆ ನೀನು.....

ನೀನೇ ನಮ್ಮೆಲ್ಲರ ಬಾಳಿನ ಜೀವಾಳ
ನೀನೇ ಭಾರತ ಮಾತೆಯ ತುಡರ್
ನೀನೇ ನಮ್ಮೆಲ್ಲರ ಪ್ರೀತಿಯ ಹೀರೋ
ಮಿಕ್ಕವರೆಲ್ಲ ನಿನ್ನೆದುರು ಜೀರೋ ....

ಓ ದೇಶವೀರ ನಿನಗಿದೋ ನನ್ನ ಸಲಾಂ
ನೀನೇ ನಮ್ಮ ಬಾಳಿನ ಮತ್ತೊಬ್ಬ ಕಲಾಂ
ಮತ್ತೆ ಹುಟ್ಟಿ ಬಾ ಭಾರತ ಮಾತೆಯ ಮಡಿಲಲ್ಲಿ
ಈ ದೇಶದ ಗಡಿ ಕಾಯುವ ದೀಪವಾಗಿ

ಲೀಲೇಶ್
ದ್ವಿತೀಯ ಬಿ. ಎ

## ತುಳುನಾಡಿನ ಅರಸು ಮನೆತನಗಳು

ತುಳುನಾಡು ತುಳು ದೇಶ ತುಳು ವಿಷಯವೆಂದು ಕರೆಯಲ್ಪಡುವ ಈ ಪ್ರದೇಶವು ಕರ್ನಾಟಕದ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಮ್ಮೆಯಿಂದ ಹೇಳಬಹುದು. ಇತಿಹಾಸದ ಆರಂಭ ಕಾಲದಲ್ಲಿ ಮೊದಲುಗೊಂಡು ಮೈಸೂರ ಅರಸರ ಕಾಲದ ವರೆಗೆ ಇದು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳನ್ನು ಘಟ್ಟದ ಮೇಲಿನ ಶಿವಮೊಗ್ಗ ,ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು. ಸಾಂಪ್ರದಾಯಿಕ ಐತಿಹ್ಯಗಳ ಪ್ರಕಾರ ಸೈಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯಿಂದ (ಈಗ ಕೇರಳದಲ್ಲಿದೆ )ಉತ್ತರದಲ್ಲಿ ಕಲ್ಯಾಣಪುರಣದ ವರೆಗೆ ಇರುವ ಪ್ರದೇಶವು ತುಳುನಾಡೆಂದು ಕರೆಯಲಾಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಅರಸುಮನೆತನಗಳು ಇಂದಿಗೂ ಅಸ್ತಿತ್ವದಲ್ಲಿದೆ. ತಮ್ಮ ಹಿಂದಿನ ಅಧಿಕಾರ ವೈಭವಗಳನ್ನು ಪೂರ್ತಿಯಾಗಿ ಕಳೆದುಕೊಂಡಿದ್ದರು ಅದರ ಕೆಲವು ಸಾಂಪ್ರದಾಯಿಕ ಆಚರಣೆಗಳು ಇಂದಿಗೂ ಜೀವಂತವಾಗಿದೆ . ತುಳುನಾಡಿನ ಪ್ರಮುಖ ಅರಸು ಮನೆತನ

**೧. ಅಳುಪರು** : ಇವರ ಬಗೆಗಿನ ಅತ್ಯಂತ ಪ್ರಾಚೀನ ದಾಖಲೆ ಮತ್ತು ಇತಿಹಾಸ ದೊರೆಯುವುದು ಹಲ್ಮಿಡಿ ಶಾಸನದಲ್ಲಿ. ಹಲ್ಮಿಡಿ ಶಾಸನವು ಅತ್ಯಂತ ಪ್ರಾಚೀನ ಶಾಸನ ದಲ್ಲಿ ಅಳುಪರ ಬಗ್ಗೆ ಉಲ್ಲೇಖವಿದೆ. ಆಳ್ವ ಗಣ ಪಶುಪತಿ ಇಲ್ಲಿ ಉಲ್ಲೇಖಿತ ನಾಗಿದ್ದಾನೆ. ಅಲ್ಪ ಪುರಾವೆಗಳ ಆಧಾರದಲ್ಲಿ ಪಶುಪತಿಯನ್ನು ಅಳುಪರ
ಪ್ರಥಮ ದೊರೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಅಳುಪರು ಪ್ರಾರಂಭದಲ್ಲಿ ಮಂಗಳಾಪುರ ದಿಂದ ರಾಜ್ಯಭಾರ ಮಾಡಿದರು.




ಆಳಿದ ಅಳುಪರು ತುಳುನಾಡಿನಲ್ಲಿ ಭವ್ಯ ಸಂ
ಪತ್ತು ಮತ್ತು ವಿಶಿಷ್ಟ ರೀತಿಯ ಧರ್ಮ ಸಾಮರಸ್ಯಕ್ಕೆ ಭದ್ರ ಬುನಾದಿ ಹಾಕಿದರು. ಆಳುಪ ರಾಜವಂಶ ಈಗ ಇಲ್ಲ ಆದರೆಲ್ಲಿ ಅವರು ಕಟ್ಟಿ ಬೆಳೆಸಿದ ಸಂಸ್ಕೃತಿ ಪರಂಪರೆ ಸಮಾಜದ ಹಾಸುಹೊಕ್ಕಾಗಿದೆ.

**೨.ಸೂರಾಲಿನ ತೊಳಹರು:** ೧೪ನೇ ಶತಮಾನದ ಮಧ್ಯಭಾಗದವರೆಗೂ ಆಳುಪರು ಅಧಿಕಾರ ನಡೆಸುತ್ತಿರು. ಆಮೇಲೆ ಹೊಯ್ಸಳರು ವಿಜಯನಗರದ ಅರಸರು ಹಾಗೂ ಕೆಳದಿ ನಾಯಕರು ತಮ್ಮ ಆಡಳಿತ ವ್ಯಾಪ್ತಿಯನ್ನು ಈ ಪ್ರದೇಶಕ್ಕೆ ವಿಸ್ತರಿಸಿದ್ದರು. ಅಲ್ಲದೆ ಈ ಪ್ರದೇಶದಲ್ಲಿ ಅನೇಕ ಸಾಮಾನ್ಯ ಅರಸುಮನೆತನಗಳು ಆಳಿದವು. ಅವುಗಳಲ್ಲಿ ಪ್ರಮುಖವಾದ ಒಂದು ಮನೆತನ ವೆಂದರೆ ಉಡುಪಿ ತಾಲೂಕು ಹಾಗೂ ಜಿಲ್ಲೆಯ ಸೂರಾಲು ಎಂಬಲ್ಲಿಂದ ಆಳಿದ ತೊಳಹರು. ಬೆಳಗಾಂ ಪ್ರದೇಶದಿಂದ ಇಲ್ಲಿಗೆ ಬಂದವರು ಎಂಬ ಅಭಿಪ್ರಾಯವಿದೆ. ಕ್ರಿ.ಶ ೧೧೯೯ ರ ಬಾಕಿಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಒಂದು ಶಾಸನ ಹಾಸನದಲ್ಲಿ ಈ ಮನೆತನದ ಬಗ್ಗೆ ಉಲ್ಲೇಖಿಸಿದ್ದಾರೆ. ಆ ಶಾಸನದ ಪ್ರಕಾರ ಅಳುಪರ ದೊರೆ ಕವಿಗಳು ಅಳುಪೇಂದ್ರನು ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ನಿರ್ಮಿಸಿದ ಶಿವಾನಂದ ಯೋಗಿ ನಿವೇದ್ಯ ಶಾಲೆಯ ನಿರ್ವಹಣೆಗಾಗಿ ೩೦ ಹೊನ್ನಿನ ಪಾಂಡ್ಯ ಸಿದ್ಯಾಣಗಳನ್ನು ಸೂರಾಲಿನ ತೊಳಹನ ವಶದಲ್ಲಿಡಲಾಯಿತು. ಆದರೆ ಯಾವುದೇ ರಾಜನ ಪ್ರಸ್ತಾಪ ಇಲ್ಲಿ ಕಂಡುಬರುವುದಿಲ್ಲ
ಆದರೆ ಈ ಶಾಸನ ಕ್ರಿಸ್ತಶಕ ೧೨ನೇ ಶತಮಾನದಲ್ಲಿ ತೊಳಹರು ತಮ್ಮ ಪ್ರಾಬಲ್ಯ ಸ್ಥಾಪಿಸಿದ ಕ್ಕೆ ಉತ್ತಮ ಉದಾಹರಣೆ.

**೩.ಗೇರುಸೊಪ್ಪೆ ಮತ್ತು ಹಾಡುವಳ್ಳಿಯ ಸಾಳುವರು:** ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ೨೬ ಕಿ.ಮಿ ದೂರದಲ್ಲಿರುವ ಗೇರುಸೊಪ್ಪೆ ಮತ್ತು ಭಟ್ಕಳದಿಂದ ೧೯ ಕಿ.ಮೀ. ದೂರದಲ್ಲಿರುವ ಹಾಡುವಳ್ಳಿಯ ಕ್ರಿ.ಶ ೧೪ –೧೫ನೇ ಶತಮಾನದಲ್ಲಿ ಸಾಲುವರ ರಾಜಧಾನಿಯಾಗಿ ಮೆರೆದಿತ್ತು. ಗೇರುಸೊಪ್ಪೆಯ ರಾಜ್ಯವು ಯಾವಾಗ ಅಸ್ತಿತ್ವಕ್ಕೆ ಬಂದಿತು ಎಂದು ಹೇಳಲು ಸ್ಪಷ್ಟ ಆಧಾರಗಳಿಲ್ಲ ವಾದರೂ ಸುಮಾರು ೧೨ –೧೩ ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿರಬೇಕೆಂದು ಮೂಡಬಿದರೆಯಲ್ಲಿ ದೊರೆತ ಒಂದು ಶಾಸನದ ಆಧಾರದ ಮೇಲಿಂದ ಹೇಳಬಹುದಾಗಿದೆ.

**ಹಾಡುವಳ್ಳಿಯ ಸಾಳುವರು:** ಹಾಡುವಳ್ಳಿಯ ಸಾಳುವ ಮನೆತನಕ್ಕೆ ಸಂಬಂಧಿಸಿದ ಮೊದಲ ದೊರೆ ಎಂದರೆ ೧೪ನೇ ಶತಮಾನದ




ಕೊನೆಯಲ್ಲಿ ನಗಿರೆಯಲ್ಲಿ ಆಳುತ್ತಿದ್ದ ಹೈವರಸ ಅಥ-ವಾ ಹೈವಭೂಪ ಇವನ ರಾಣಿ ಭೈರಾದೇವಿ. ಇವನಿಗೆ ಮಲ್ಲಿ ರಾಯ ಸಂಗಿ ರಾಯ ಹೆಸರಿನ ಇಬ್ಬರು ಮಕ್ಕಳು. ಸಂಗಿ ರಾಯ ಕ್ರಿ.ಶ. ೧೪೦೮ ರಿಂದ ೧೪೪೯ ರವರೆಗೆ ಅಂದರೆ ಸುಮಾರು ೪೦ ವರ್ಷಗಳ ವರೆಗೆ ಇವನು ರಾಜ್ಯವಾಳಿದರು.

**೪.ಬಂಗಾಡಿಯ ಬಂಗರು** :ಕರಾವಳಿ ಕರ್ನಾಟಕವನ್ನು ಆಳಿದ ಪ್ರಸಿದ್ಧ ಅರಸು ಮನೆತನಗಳ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಭಂಗವಾಡಿಯಿಂದ ಆಳಿದ ಬಂಗ ಅರಸು ಮನೆತನವು ಒಂದು.


**ಉಳಿದ ಅರಸು ಮನೆತನಗಳು:** ಕಾರ್ಕಳದ ಭೈರರಸ ಒಡೆಯರು, ಕುಂಬಳೆ ಅರಸುಮನೆತನ, ಹೊಸಂಗಡಿಯ ಹೊನ್ನೆಯ ಕಂಬಳಿಯರಸರು, ಪುತ್ತಿಗೆ-ಮೂಡಬಿದಿರೆಯ ಚೌಟರು, ವಿಟ್ಲದ ಡೊಂಬ ಹೆಗಡೆ ಅರಸರು, ಮೂಲಿಕೆ ಸಾವಂತರಸರು.

– ತೇಜಸ್ವಿನಿ
ತೃತೀಯ.ಬಿ.ಎ.



# ಬದುಕು ..... ಬದುಕಲು ಬಿಡು

ಮನುಷ್ಯನು ಪ್ರಾಣಿಗಳಲ್ಲಿ ಒಬ್ಬನಾದರು ತಾನು ಪ್ರಾಣಿಗಳಿಗಿಂತ ಭಿನ್ನ ಎಂದು ಹೇಳಿಕೊಳ್ಳುತ್ತಾನೆ. ಮನುಷ್ಯನು ಹೇಗೆ ಪ್ರಾಣಿಗಳಿಂದ ಭಿನ್ನವೆಂಬ ಪ್ರಶ್ನೆಗೆ ಸಹಜವಾಗಿಯೇ ಹೇಳಬಹುದು. ಪ್ರಾಣಿಗಳಿಗೆ ಬುದ್ಧಿಶಕ್ತಿಯಿಲ್ಲ, ಅವುಗಳಲ್ಲಿ ಸಾಮಾಜಿಕ ಒಕ್ಕೂಟವಿಲ್ಲ, ವಾಕ್ ಶಕ್ತಿಯಿಲ್ಲವೆಂದು ಪ್ರಸ್ತಾಪಿಸಬಹುದು. ಆದರೆ ಮನುಷ್ಯನಿಗೂ



ಇವೆಲ್ಲವೂ ಇದೆ ಎಂದು ಹೇಳಬಹುದಾದರು ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಒಂದು ಅಂಶವೆಂದರೆ ಅದು "ಸಂಸ್ಕೃತಿ" ಹೌದು ಸಂಸ್ಕೃತಿಯು ಮನುಷ್ಯ ಮತ್ತು ಪ್ರಾಣಿಗಳಿಗೆ ವ್ಯತ್ಯಾಸವೆಂದು ಹೇಳಿದರೆ ತಪ್ಪಾಗದು. ಕಾಲಾನುಕ್ರಮೇಣ ಮನುಷ್ಯನು ಸ್ವಾರ್ಥಸಾಧನೆಗೊಸ್ಕರ ಮಾನವೀಯತೆಯನ್ನು ಮರೆಯುತ್ತಿದ್ದಾನೆ. ಸುಸಂಸ್ಕೃತನಾಗಿದ್ದ ಮಾನವನು ಅಸಂಸ್ಕೃತನಾಗಿದ್ದಾನೆ .ತನ್ನ ಪ್ರವೃತಿ ಹಾಗೂ ವರ್ತನೆಗಳನ್ನು ಮಾರ್ಪಾಡು ಮಾಡಿಕೊಂಡು ನಾಗ-ರಿಕತೆಯನ್ನು ಪಡೆದುಕೊಂಡಿದ್ದ ಮಾನವ ಇತ್ತೀಚಿಗೆ ಅನಾಗರಿಕನಂತೆ ವರ್ತಿಸುತ್ತಿದ್ದಾನೆ.

ಉಚ್ಚಮಟ್ಟದ ಹಾಗೂ ವೈಭವ ಪರಂಪರೆಯನ್ನು ಹೊಂದಿದ ಸಂಸ್ಕೃತಿಗೆ ಹೆಸರಾದ ಭರತಖಂಡದಲ್ಲಿದ್ದೇವೆ. ನಮ್ಮ ಪೂರ್ವಜರ ಕಾಲದಲ್ಲಿ ದುಡಿದು ತಿನ್ನುವ ಮನೋಭಾವವು ಅವರಲ್ಲಿತ್ತು. ಆದರೆ ನಮ್ಮಲ್ಲಿ ಬದಲಾಗಿದೆ, ಎಲ್ಲವು ಕೂತಲ್ಲಿಗೆ ಬರಬೇಕು , ಜೊತೆಗೆ ತಂತ್ರಜ್ಞಾನವು ಮುಂದುವರೆದಿದ್ದು ದೈಹಿಕ ದುಡಿಮೆಯನ್ನು ಮರೆಯುತ್ತಾ ಇದ್ದೇವೆ. ನಾವು ಎಷ್ಟೇ ತಾಂತ್ರೀಕವಾಗಿ ಮುಂದುವರೆದರು ಹಸಿವನ್ನು ನಿವಾರಿಸಲು ಆಹಾರವೇ ಹೊರತು ಹಣವಲ್ಲ. ವಿಪರ್ಯಾಸವೆಂದರೆ ಆಹಾರ ಎಲ್ಲರಿಗೂ ಬೇಕು

ಆದರೆ ಬೇಸಾಯ ಮಾಡಲು ಯಾರು ತಯಾರಿಲ್ಲ......! ಮಾನವನು ಆರ್ಥಿಕತೆಯ ದೃಷ್ಟಿಕೋನದಿಂದ ಜೀವನವನ್ನು ಕಲ್ಪಿಸಿಕೊಂಡಿದಾನೆ. ಹಣಮಾಡಬೇಕು, ಶ್ರಿಮಂತನೆನಿಸಿಕೊಳ್ಳಬೇಕು , ಎಲ್ಲರು ತನ್ನ ಕೈ ಕೆಳಗೆ ಕೆಲಸಮಾಡಬೇಕು ಎಂದು ಯೋಚಿಸುತ್ತಾನೆ. ದುಡ್ಡುಎಣಿಸುತ್ತ ಶ್ರೀಮಂತನಾಗಿದ್ದೇನೆ ಎಂದು ಬೀಗುವುದಕ್ಕಿಂತ ಅತ್ತಾಗ ಸಮಾದಾನ ಮಾಡಲು ಎಷ್ಟುಜನ ಮುಂದಿದ್ದಾರೆ ಎಂದು ಯೋಚಿಸುವುದು ಒಳ್ಳೆಯದಲ್ಲವೇ.....? ಕೆಲವರಿಗೆ ನಿರ್ದಿಷ್ಟವಾದ ವಿಳಾಸವಿಲ್ಲ, ಅವರ ಯೋಗಕ್ಷೇಮಗಳನ್ನು ನೋಡಿಕೋಳ್ಳುವವರಿಲ್ಲ, ಇಲ್ಲಗಳ ನಡುವೆ ಸಂಚಾರ ಜೀವನವನ್ನು ನಡೆಸುತ್ತ ಆರ್ಥಿಕವಾಗಿ ಎಲ್ಲ ಇರುವವ-ರಿಗಿಂತ ನೆಮ್ಮದಿಯಾಗಿರುತ್ತಾನೆ. ದಿನ ಕಳೆದಂತೆ ಮಾನವ ನೆಮ್ಮದಿ , ಸಂತೃಪ್ತಿಯಿಲ್ಲದೆ, ಸಾಲ ಮಾಡಿಯಾದರೂ ಅವನಿಗಿಂತ ನಾನು ಶ್ರೇಷ್ಠನೆನೆಸಿಕೊಳ್ಳಬೇಕು ಎಂದು ಪೇಚಾಡುತ್ತಿದ್ದಾನೆ.

ಜೀವನವನ್ನು, ಮಾನವೀಯ ಮೌಲ್ಯವನ್ನು ಯಾರೂ ಪೀತಿಸುತ್ತಾರೊ ಅವರೇ ನಿಜವಾದ ಶೀಮಂತರು, ಒಳ್ಳೆಯ ಗುಣ-ಕ್ಕೆ ಆರ್ಥಿಕ ಲಾಭ ದೊರಕದಿದ್ದರು ಅಂತಹ ಗುಣಕ್ಕೆ ಸಾವಿರಾರು ಮನಸ್ಸುಗಳನ್ನು ಗೆಲ್ಲುವ ಶಕ್ತಿಯಿದೆ. ನಮ್ಮ ನಡೆನುಡಿಯಲ್ಲಿ ಸತ್ಯಾಂಶವಿದ್ದರೆ ಜಗತ್ತನ್ನೇ ಗೆಲ್ಲುವ ಶಕ್ತಿ ನಮಗಿದೆ . ಸುಳ್ಳು ,ಮೋಸ, ವಂಚನೆಗಳು ಕ್ಷಣಮಾತ್ರದಲ್ಲಿ ಸಂತೋಷವನ್ನು ಕೊಟ್ಟರೂ ಅದ-ರಿಂದ ಪಶ್ಚಾತಾಪವನ್ನು ಪಡುವ ದಿನವು ಬಂದೇ ಬರುತ್ತದೆ ಹಾಗಾಗಿ ಸತ್ಯಪರ ನಾವಿದ್ದೂ ಎಲ್ಲರ ಒಳಿತನ್ನು ಬಯಸುತ್ತ ತಾವು ಒಳಿತಾಗುವ.

– ವಿದ್ಯಾ.ಎ.ಜಿ ತೃತೀಯ ಬಿ.ಎ

## ತುಳು ಒಗಟು

೧. ತಗ್ಗುದ ದೇವತಾನೊಗು ಬಗ್ಗದು ನಮಸ್ಕಾರ?
೨. ಆಯೇ ಸಾಲೆಡ್ಡು ಬತ್ತೆ, ಇಜಾರ್ ಜಾರೆಯೆ, ಗುಂಡಿಗ್‌ಲಾಗಿಯೇ?
೩. ರಡ್ಡು ತೋಡುಗು ಒಂಜೆ ಪಾಂಪು?
೪. ದೇವಸ್ಥಾನ ಮಿತ್ತ್ ಮುಗುಳಿ ತಿರ್ತು?

ಉತ್ತರ :

[illegible]

## ತಾಯಿ

ಎರಡು ಪದ ಅಷ್ಟೇ, ಅದರ ರೂಪ ಹಲವು. ಹುಟ್ಟಿದಾ ಗಿದಿಂದ ಸಾಕಷ್ಟು ತೊಂದರೆ ನಡುನಡುವೆ ಬೆಳೆಯುತ್ತಾಳೆ. ಒಂದು ಮಗಳಾಗಿ, ಅಕ್ಕನಾಗಿ, ತಂಗಿಯಾಗಿ, ಹೆಂಡತಿಯಾಗಿ , ಚಿಕ್ಕಮ್ಮನಾಗಿ, ತಾಯಿಯಾಗಿ ,ಅತ್ತೆಯಾಗಿ ,ಅಜ್ಜಿಯಾಗಿ ಹೀಗೆ ಅವಳ ಪಾತ್ರ ಹಲವು. ಅವಳನ್ನು ಗಡಿಯಾರ ಅಂದರೆ ತಪ್ಪಿಲ್ಲ ದಿನದ ಇಪ್ಪತ್ತನಾಲ್ಕು ಗಂಟೆ



ಸಹ ಮೈಯೆಲ್ಲ ಕಣ್ಣಾಗಿ ತನ್ನ ಮನೆಯನ್ನು ನಡೆಸುತ್ತಾಳೆ. ತಾನು ತಿನ್ನದಿದ್ದರೂ ಪರವಾಗಿಲ್ಲ ತನ್ನ ಗಂಡ, ಮಗು ಚೆನ್ನಾಗಿರಬೇಕೆಂದು ಬಯಸುವ ನಿಸ್ವಾರ್ಥ ಮಹಿಳೆ ತಾಯಿ. ಯಾವುದೋ ಊರಿನಲ್ಲಿ ಮಗಳಾಗಿ ಹುಟ್ಟುವ ಅವಳು ಕಾಣದ ಗೊತ್ತುಗುರಿಯಿಲ್ಲದ ಊರಿಗೆ ಸೊಸೆಯಾಗಿ ಹೆಂಡತಿಯಾಗಿ ಬರುತ್ತಾಳೆ, ಅವರ ಆಚಾರ ವಿಚಾರ ಮನೆತನದ ಬಗ್ಗೆ ತಿಳಿದುಕೊಳ್ಳುವ ಅಷ್ಟರಲ್ಲೇ ವರ್ಷಗಳು ಕಳೆಯುತ್ತವೆ. ಅಷ್ಟರಲ್ಲಿ ತಾಯಿಯಾಗುತ್ತಾಳೆ. ಹೀಗೆ ಅವಳು ಎಷ್ಟು ಓದಿದರೂ ಕೆಲಸದಲ್ಲಿದ್ದರು ತನ್ನ ಮನೆಯನ್ನು ಬಿಟ್ಟು ಹೌಸ್ವೈಫ್ ಎಂಬ ಪಟ್ಟ ಕಟ್ಟಿಕೊಳ್ಳುತ್ತಾಳೆ. ಒಂದು ಕಬ್ಬು ತನ್ನನ್ನು ಸವೆಸಿ ಹೇಗೆ ಎಲ್ಲರಿಗೂ ಸಿಹಿ ನೀಡುತ್ತದೆಯೋ ಹಾಗೆಯೇ ತಾಯಿಯೂ ಕೂಡ ಎಂದು ಹೇಳಿದರೆ ಸುಳ್ಳಾಗದು. ಎದೆ ತಟ್ಟಿ ಹೇಳಿ 'ಹೆಣ್ಣು ಮಕ್ಕಳ'ನ್ನು ಪಡೆದ ತಂದೆ-ತಾಯಿಯರೇ ನೀವು ನಿಜವಾಗಿಯೂ ಅದೃಷ್ಟವಂತರು. ದೀಪದ ಬೆಳಕನ್ನು ಕಂಡು ನಾವು ಖುಷಿಪಡುತ್ತೇವೆ ಆದರೆ ಅದರ ಹಿಂದೆ ಇರೋ ಎಣ್ಣೆ ಮತ್ತು ಬತ್ತಿಯ ಬೆಲೆ ನಮಗೆ ತಿಳಿಯದು ಹಾಗೆ ತಾಯಿಯ ಪ್ರೀತಿ ನಮ್ಮ ಮೇಲೆ. ಪ್ರತಿಯೊಬ್ಬರೂ ತಾಯಿಯನ್ನು ನಿಮ್ಮ ಗುರುವಾಗಿ ಇಟ್ಟುಕೊಳ್ಳಿ ಜೀವನದಲ್ಲಿ ಎತ್ತರ ಸ್ಥಾನಕ್ಕೆ ತಲುಪುತ್ತೀರಿ.

ಸ್ವಾತಿ ಎಮ್
ದ್ವಿತೀಯ ಬಿ.ಎಸ್ಸಿ.

## ಪುರಾಣಗಳಲ್ಲಿ ತುಳುನಾಡು

ತುಳು ಭಾಷೆ ಮತ್ತು ತುಳು ನಾಡು ಎಂಬುದು ಬಹಳ ಪ್ರಾಚೀನವಾದುದು. ತುಳು ನಾಡು ಎಂದು ಗುರುತಿಸುವ ಪ್ರದೇಶಗಳೆಲ್ಲ ನಮ್ಮ ಹಿಂದೂ ಪುರಾಣ, ಕಾವ್ಯಗಳಲ್ಲಿ ಉಲ್ಲೇಖವಿದೆ. ರಾಮಾಯಣ ಕಾಲದಲ್ಲಿ ಮತ್ತು ಮಹಾಭಾರತದ ಕಾಲದಲ್ಲಿ ನಮ್ಮ ತುಳುನಾಡ ಒಂದೊಂದು ಪ್ರದೇಶಗಳು ಕಾಣಸಿಗುತ್ತದೆ. ತುಳು ಭಾಷೆಗೆ ಅದರದೇ ಆದ ವೈಶಿಷ್ಟ್ಯತೆ ಮತ್ತು ಲಿಪಿ, ಸಂಸ್ಕೃತಿ ಇದೆ.

ರಾಮಾಯಣ ಕಾಲದಲ್ಲಿ ತುಳು ಪ್ರದೇಶಗಳು:ರಾಮಾಯಕಾಲ ಯಾವುದೆಂದು ಇನ್ನೂ ನಿಶ್ಚಯವಾಗಿಲ್ಲ. ರಾವಣನು ಶಿವಭಕ್ತನಾಗಿದ್ದನು. ಹಾಗಾಗಿ ತುಳುನಾಡಿನ ಉತ್ತರ ಭಾಗವಾದ ಗೋಕರ್ಣ ಪ್ರದೇಶದಲ್ಲಿ ಶಿವಲಿಂಗ ಸ್ಥಾಪಿಸಿದ್ದಾನೆಂದು ಉಲ್ಲೇಖವಿದೆ. ಮಹಾಭಾರತದ ಕಾಲದಲ್ಲಿ ತುಳು: ಮಹಾಭಾರತದ ಪಾಂಡವರು ಅಜ್ಞಾತವಾಸದಲ್ಲಿ ದಕ್ಷಿಣ ಕನ್ನಡದಲ್ಲಿದ್ದರು ಎಂಬುದಕ್ಕೆ ಕೆಲವು ಕುರುಹುಗಳಿವೆ.ಕದ್ರಿಯಲ್ಲಿ ಪಾಂಡವರ ಗವಿಗಳು: ಕಾಸರಗೋಡಿನಿಂದ ಮೂರು ಮೈಲಿ ದೂರ ಪೂರ್ವಕ್ಕೆ ಪಾಂಡವರ ಕೆರೆಯೊಂದು ಇದೆ.

ಉಡುಪಿಯಲ್ಲಿ ಬಭ್ರುವಾಹನನ ಮಣಿಪುರವಿದೆ. ಮಂಗಳೂರು ತಾಲೂಕಿನ ಸರ್ಪಾಡಿ ಗ್ರಾಮದ ಕುಟಕುಂಜೆಯಲ್ಲಿ ಪಾಂಡವರ ಕಲ್ಲು ಇದೆ. ಹೀಗೆ ಈ ಎಲ್ಲಾ ಕಾರಣಗಳಿಂದ ತುಳುನಾಡಿನ ಜನರು



ಪಾಂಡವರು ನಮ್ಮ ನಾಡಿಗೆ ಬಂದಿದ್ದರು ಎಂಬುದನ್ನು ನಂಬಿದ್ದಾರೆ. ಹೀಗೆ ಪಾಂಡವರ ಸಂಬಂಧವನ್ನು ಹೇಳುವ ಗವಿ, ಕಲ್ಲು ಕೆರೆಗಳು ನಮಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಆದರೆ ಹಿಂದೂ ದೇಶದ ಎಲ್ಲಾ ಕಡೆ ಇದ್ದರು ಎಂದು ಹೇಳಲು ಸಾಧ್ಯವಿಲ್ಲ. ಪುರಾಣಗಳ ಕಾಲದಲ್ಲಿ ನಮ್ಮ ತುಳುನಾಡಿಗೆ ಪ್ರತ್ಯೇಕವಾಗಿ ಗುರುತಿಸುವಂತಹ ವ್ಯಕ್ತಿತ್ವ ತೋರುವುದಿಲ್ಲ. ಆದ್ದರಿಂದ ಪುರಾಣಗಳಲ್ಲಿ ಪ್ರತ್ಯೇಕ ಜಿಲ್ಲೆಗಳ ಹೆಸರು ಕಂಡುಬಂದರೂ ತುಳುನಾಡು ಎಂಬ ಶಬ್ದ ಕಂಡುಬರುವುದಿಲ್ಲ.

– ಸಂಗ್ರಹ: ಪ್ರೇಮ

## " ತುಳುನಾಡ್‌ದ ಸೊಬಗ್"

ಕೋಟಿ-ಚೆನ್ನಯರಂಚಿನ ವೀರರೆನ್
ಕೊರ್ನ್‌ನಾಡ್
ಭೂತ ನಾಗಾರಾಧನೆದ ದೈವೀ
ಬೂಡು
ಈ ನಮ್ಮ ಸರ್ವರೆನ ತುಳುನಾಡು
ಕೋಲ ಕಂಬುಳ ಮೂಲುಂಡು
ನೇಜಿ ನಡ್ಪಾಗದ ಪದ ಪಾತೆರಡ್
ಜಾನಪದ ಸೊಬಗುಂಡು
ಅಪ್ಪೆನ ಕೈತ ಗಂಜಿದ ಪೊರ್ಲುದ
ಕಮ್ಮೆನಗ್
ದೈವ ದೇವೆರ್ ಭೂಮಿಗ್
ಬರುವೆರೆಗೆ
ಯಕ್ಷಗಾನದ ಸೊಬಗ್ ಇಪ್ಪುನ
ಪೊರ್ಲುದನಾಡ್
ಈ ನಮ್ಮ ತುಳುನಾಡ್



ಪ್ರತಾಪ್
ತೃತೀಯ ಬಿ.ಎ


HEALTH IS WEALTH

: ಔಷಧಿ ದೊರೆಯುವ ಸ್ಥಳ :

ಧರ್ಮಶ್ರೀ ಮೆಡಿಕಲ್ಸ್, ಧರ್ಮಸ್ಥಳ



ಫೋ: 277280



ಉತ್ತಮ ಗುಣಮಟ್ಟದ ವಸ್ತ್ರಗಳು ನಗುಮುಖದ ಸೇವೆಯೊಂದಿಗೆ

ಸಂಪೂರ್ಣ ಟೆಕ್ಸ್‌ಟೈಲ್ಸ್

ಆರಿಪ್ಪಾಡಿ ಮಠ ಕಾಂಪ್ಲೆಕ್ಸ್
ಉಜಿರೆ ರಸ್ತೆ ಉಜಿರೆ - 574 240
ಫೋನ್ - 08256-237249



ಸೀರೆಗಳು,ಎತ್ನಿಕ್ ವೇರ್,
ಫ್ಯಾಬ್ರಿಕ್ ಸ್ಟೋಲ್ & ದುಪ್ಪಟಗಳು,
ಹೋಮ್ ಲಿನೆನ್ ನಮ್ಮಲ್ಲಿ ದೊರೆಯುತ್ತದೆ.

# ತುಳು ಶಾಸನಗಳು

ತುಳುವಿಗೆ ಸಂಬಂಧಪಟ್ಟಂತೆ ಹಲವಾರು ಶಾಸನಗಳು ದೊರಕಿವೆ, ಮತ್ತು ದೊರುಕುತ್ತಿವೆ. ಈ ಶಾಸನಗಳು ತುಳು ಲಿಪಿಯಲ್ಲಿವ ಕೆಲವೊಂದು ಕನ್ನಡ ಲಿಪಿಯಲ್ಲಿದೆ. ಅಂತಹ ಶಾಸನಗಳ ಬಗ್ಗೆ ಸಣ್ಣ ವಿವರ ಕೆಳಗಿದೆ.

**೧)ಮಂಗಳೂರಿನ ಕುಲಶೇಖರದ ಶಾಸನ**

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ತಜ್ಞರ ಪ್ರಕಾರ ಈ ಶಾಸನವು ತುಳು ಭಾಷೆಯಲ್ಲಿ ಬರೆಯಲಾಗಿದೆ. ಈ ಶಾಸನವು ವೈಷ್ಣವ ದೇವರು ಭಗವಾನ್ ಹರಿಯ ಆಹ್ವಾನದಿಂದ ಪ್ರಾರಂಭವಾಗುತ್ತದೆ. ಇದು ಮೊದಲ ತುಳು ಶಾಸನವಾಗಿದೆ.

೧೨ ಗ್ರಾಮಗಳ ದೇವರಾಗಿರುವ 'ಪಿತೃ-ದೇವತಾ' ಜನಾರ್ದನ ಅಗಲಿದ ಆತ್ಮಗಳಿಗೆ ಮೋಕ್ಷವನ್ನು ಕೊಡುವವನು ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಅಳುಪಾ ಚಕ್ರವರ್ತಿಯನ್ನು "ಲೋಕಂತಮಂತ" ಎಂದು ವಿವರಿಸಲಾಗಿದೆ. ಇದರರ್ಥ ತುಳುವಿನಲ್ಲಿ 'ವಿಶ್ವದಲ್ಲಿ ಪ್ರಸಿದ್ಧ' ಎಂಬುದಾಗಿದೆ.



ತುಳು ಭಾಷೆ ಮತ್ತು ಸಂಸ್ಕೃತಿಯ ಅಧ್ಯಯನದಲ್ಲಿ ಈ ದಾಖಲೆ ಪ್ರಮುಖ ಪಾತ್ರವಹಿಸುತ್ತದೆ. ಇದನ್ನು ತುಳು ಭಾಷೆಯಲ್ಲಿ ಬರೆಯಲಾಗಿದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿಯ ಮೊದಲ ಶಾಸನವಾಗಿದೆ. 'ಪದರಡ್', 'ಪದಿರಡ್', 'ದಿಕ್', 'ಸಕ್' 'ಲೋಕಂತಮಂತ' ಮತ್ತು ಇತರ ಶುದ್ಧ ತುಳು ಪದಗಳನ್ನು ಶಾಸನಗಳಲ್ಲಿ ಬಳಸಲಾಗಿದೆ.

**೨) ಅಲೆವೂರಿನಾ ಶಾಸನ**

೧೪ನೇ ಶತಮಾನದ ತ್ರಿಕೋನ ಆಕಾರದ ಕಲ್ಲಿನ ಶಾಸನವೊಂದನ್ನು ಉಡುಪಿ ತಾಲೂಕಿನ ಅಲೆವೂರು ಬಳಿಯ ಮೇಲಿನ ಕೋಲಾಪು ಮಹಾವಿಷ್ಣು ಮೂರ್ತಿ ದೇವಸ್ಥಾನದ ಹೊರಗೆ ಪತ್ತೆ ಮಾಡಲಾಗಿದೆ. ಶಾಸನದ ಮೇಲಿನ ಭಾಗದಲ್ಲಿ 'ಶಿವಲಿಂಗ' ಕೆತ್ತಲಾಗಿದೆ. ನಂದಿ, ಸೂರ್ಯ ಮತ್ತು ಚಂದ್ರರನ್ನು ಕಲ್ಲಿನ ಶಾಸನದಲ್ಲಿ ಕೆತ್ತಲಾಗಿದೆ. ಶಾಸನವು ೧೯ ಸಾಲುಗಳನ್ನು ಹೊಂದಿದೆ. ಇದು ಕನ್ನಡದ ದಾನಶಾಸನ ಎಂಬ ಅನುದಾನ ಶಾಸನವೆಂದು ಕಾಣುತ್ತದೆ ಎಂದು ಪುರಾತತ್ವ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಲುಪ ರಾಜವಂಶಕ್ಕೆ ಸೇರಿದ ಶಾಸನದಲ್ಲಿ ದೇವಾಲಯದ ಉಸ್ತುವಾರಿ ವಹಿಸಿದ್ದ ಅಧಿಕಾರಿಗೆ ಉಲ್ಲೇಖಿಸಲಾಗಿದೆ. ಪುರಾತತ್ವಜ್ಞರ ಪ್ರಕಾರ ಈ ಶಾಸನವು ೧೪ನೇ ಶತಮಾನಕ್ಕೆ ಸೇರಿದೆ.

**೩. ಅನಂತಪುರ ಶಾಸನ**

ಕುಂಬಳೆ ಬಳಿಯ ಅನಂತಪುರದಲ್ಲಿ ಪ್ರಾಚೀನ ತುಳು ಶಾಸನ ಪತ್ತೆಯಾಗಿದೆ. ಮಧೂರು ದೇವಸ್ಥಾನಕ್ಕೆ ಹೋಗುವ ರಸ್ತೆಯಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿರುವ ಪರಕ್ಕಿಲಾ ಮಾಲಿಂಗೇಶ್ವರ ದೇವಸ್ಥಾನದ ಪುಡುಗೋಪುರದಲ್ಲಿ ಈ ಶಾಸನವು ಪತ್ತೆಯಾಗಿದೆ. ಮಧೂರು ದೇವಸ್ಥಾನಕ್ಕೂ ಮಹಾಲಿಂಗೇಶ್ವರ ದೇವಸ್ಥಾನಕ್ಕೂ ಸಂಬಂಧವಿರುವುದು ಹಲವರ ಆಶ್ಚರ್ಯಕ್ಕೆ ಕಾರಣವಾಗಿದೆ. ಈ ಪ್ರಾಚೀನ ಶಾಸನವನ್ನು ಓದಲಾಗುದಿಲ್ಲ.

**೪) ಕೋಟಾದ ಶಾಸನ**

ಕೋಟಾ ಹಿರೇ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕಂಡುಬರುವ ಕಂಬದ ಶಾಸನವು ಕನ್ನಡ ಮತ್ತು ತುಳು ಭಾಷೆಗಳಲ್ಲಿ ೨೭ ಸಾಲುಗಳ ಪಠ್ಯವನ್ನು ಹೊಂದಿರುವ ಎರಡು ಬದಿಗಳನ್ನು ಹೊಂದಿದೆ. ತುಳು ಪಠ್ಯವು ತುಳುವಿನ ಸ್ವಂತ ಲಿಪಿಯಲ್ಲಿದೆ. ಈ ಶಾಸವು ಕುಲಶೇಖರ ಅಲುಪೇಂದ್ರರ ಕಾಲಕ್ಕೆ ಸೇರಿದ್ದು ಎಂದು ಪರಿಗಣಿಸಲಾಗಿದೆ. ಈ ಕಾರಣದಿಂದಲೇ ಇದು ೧೨ನೇ ಶತಮಾನಕ್ಕೆ ಸೇರಿದ ಶಾಸನವೆಂದು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**೫) ಇಳಂತಿಲದ ಶಾಸನ**

ಇದು ಇತ್ತೀಚೆಗೆ ದೊರೆತ ಶಾಸನ. ಇಳಂತಿಲ ಗ್ರಾಮದ ದೇವಾಲಯದಲ್ಲಿ ಇತಿಹಾಸಗಾರರಾದ ಶ್ರೀಯುತ ಉಮಾನಾಥ ಶೆಣೈ ಮತ್ತು ಡಾ. ವಿಘ್ನರಾಜರು ಪತ್ತೆಹಚ್ಚಿದ್ದಾರೆ.

**೬) ಕೊಡಂಗಳಾದ ಶಾಸನ**

ಕೊಡಂಗಳ ಶ್ರೀ ವಿಷ್ಣು ಮೂರ್ತಿ ದೇವಾಲಯದಲ್ಲಿ ಶೀಯುತ ಶ್ರುತೇಶ್ ಆಚಾರ್ಯ ಮತ್ತು ಶ್ರೀ ಸುಭಾಷ್ ನಾಯಕ್ ಪತ್ತೆಹಚ್ಚಿದ್ದಾರೆ.

– ಕಾವ್ಯಶ್ರೀ.ಕೆ
ತೃತೀಯ ಬಿ.ಎ

# ಮೂಕ ಪ್ರೀತಿ

ಪ್ರೀತಿ ಎನ್ನೋದು ಯಾರನ್ನು ಬಿಟ್ಟಿಲ್ಲ ಹೇಳಿ ? ಪ್ರತಿಯೊಂದು ಜೀವ ಸಂಕುಲದ ಮನಗಳಲ್ಲಿ ಅಳೆಯಲಾಗದಷ್ಟು ಪ್ರೀತಿ ಇರುತ್ತೆ, ಪ್ರೇಮ ಇರುತ್ತೆ, ಜೊತೆ ಜೊತೆಗೆ ಅಪಾರ ಪ್ರಮಾಣದ ವಿಶ್ವಾಸ ಪ್ರೀತಿ ಅನ್ನೋದು ಬರೀ ಮಾತಿನ ಅಲೆಗಳ ಮೂಲಕ ನಡೆಯುವ ಪಯಣ ಅಲ್ಲ . ಎರಡು ಮುಗ್ಧ ಮನಸುಗಳ ಹೃದಯದ ನಡುವಿನ ಪಿಸುಮಾತುಗಳೇ ಪ್ರೀತಿ. ನೂರಾರು ವೇದನೆಯ ನಡುವೆ ಹುಟ್ಟುವ ಸಂತೋಷವೇ ಪ್ರೀತಿ. ಪ್ರೀತಿ ಅಂದ್ರೆ ಎರಡು ಪ್ರೀತಿಸುವ ಹೃದಯಗಳ ನಡುವಿನ ಪಿಸುಮಾತು ಮಾತ್ರ ಅಲ್ಲ, ಎರಡು ವ್ಯಕ್ತಿತ್ವದ ನಡುವಿನ ಮೂಕ ಸೇತುವೆ ಈ ಪ್ರೀತಿ. ಇಂತಹ ಮೂಕ ಪ್ರೀತಿಯ ಒಂದು ಚಿಕ್ಕ ಕಥೆ ನಿಮಗಾಗಿ.




ಒಂದು ಊರಿನಲ್ಲಿ ಒಬ್ಬ ಪ್ರವೀಣ ಬೇಟೆಗಾರ ಇರುತ್ತಾನೆ. ದಿನವಿಡೀ ಬೇಟೆಯಾಡಿ ಪ್ರಾಣಿಗಳ ಮಾಂಸ ಸೇವಿಸುವುದು ಈತನ ಹವ್ಯಾಸ. ಇಟ್ಟ ಗುರಿ ಎಂದೂ ತಪ್ಪುವುದಿಲ್ಲ ಎಂಬ ನಂಬಿಕೆಯಿಂದ ದಿನಕ್ಕೆ ಒಂದಾದರೂ ಪ್ರಾಣಿಗಳನ್ನು ಬೇಟೆಯಾಡಿ ತನ್ನ ಜೀವನವನ್ನು ನಡೆಸುತ್ತಿದ್ದ. ಅದಕ್ಕಾಗಿ ನಿಯತ್ತಿನ ಪ್ರಾಣಿಯಾದ ನಾಯಿಯನ್ನು ಸಾಕಿಕೊಂಡಿದ್ದ. ನಾಯಿ ತನ್ನ ಒಡೆಯ ಬೇಟೆಗಾರನಿಗಿಂತಲು ಚುರುಕಾಗಿತ್ತು. ದಿನವಿಡೀ ಬೇಟೆಯಾಡಲು ಬೇಟೆಗಾರ ತನ್ನ ಪ್ರೀತಿಯ ನಾಯಿಯೊಂದಿಗೆ ಕಾಡಿನ ಕಡೆಗೆ ನಡೆಯುತಿದ್ದ. ಒಮ್ಮೆ ಬೇಟೆಗೆಂದು ನಾಯಿಯೊಂದಿಗೆ ಹೊರಟ ಬೇಟೆಗಾರ ಊರಿನ ಕಡೆಗೆ ಬರಲೇ ಇಲ್ಲ. ಸುಮಾರು ದಿನಗಳ ನಂತರ ಅದೇ ಬೇಟೆಗಾರ ದಟ್ಟವಾದ ಅಡವಿಯಲ್ಲಿ ಸತ್ತು ಬಿದ್ದಿರುವ ವಿಷಯ ತಿಳಿದು ಬಂತು.

ಒಂದೆಡೆ ಅದೇ ಕಾಡಿನ ಜಾಗದಲ್ಲಿ ಬೇಟೆಗಾರನ ಅಸ್ಥಿಪಂಜರ ಕಂಡುಬಂತು, ಬೇಟೆಗಾರ ಸತ್ತುಬಿದ್ದಿದ್ದ. ಆತನ ಕಾಲಿನ ಕೆಳಗಡೆ ಮೂಕ ಪ್ರಾಣಿ ನಾಯಿಯ ಆಸ್ತಿ ಪಂಜರವು ಕಂಡು ಬಂತು. ಎಂತಹ ಪ್ರೀತಿ ಅಲ್ವಾ ಈ ಮೂಕ ಜೀವಿದ್ದು ಪಾಪ. ತನ್ನ ಒಡೆಯ ಸತ್ತು ಹೋಗಿದ್ದ ವಿಷಯ ತಿಳಿಯದೆ ಈ ಮೂಕ ಪ್ರಾಣಿ ಆತ ಮಲಗಿರುವನೆಂದು ತಿಳಿದು ಹಗಲು ರಾತ್ರಿ – ಮಳೆ ಚಳಿಯನ್ನು ಲೆಕ್ಕಿಸದೆ ದಿನವಿಡೀ ಅನ್ನ ನೀರನ್ನು ಬಿಟ್ಟು ತನ್ನ ಒಡೆಯನ ಕಾವಲು ಕಾಯುತ್ತಾ, ಕೂತಿದ್ದ ಜಾಗದಲ್ಲಿ ಶಾಶ್ವತವಾಗಿ ತನ್ನ ಜೀವವನ್ನೇ ತೊರೆದ ಮೂಕ ಜೀವಿಯ ಪ್ರೇಮ ಕಥೆಯಿದು.

– ಲೀಲೇಶ್
ದ್ವಿತೀಯ ಬಿ. ಎ

## ನಾವು ತುಳುನರು ನಾವು ಕನ್ನಡಿಗರು

ನಾವು ತುಳುವರು ನಾವು ಕನ್ನಡಿಗರು
ಕೆಣಕದಿರಿ ತುಳುವರ ತಾಳ್ಮೆಯ
ಮರೆಯದಿರಿ ಅವರ ಕನ್ನಡದೊಲ್ಮೆಯ
ಕನ್ನಡಬ್ಬೆಯೂ
ತುಳುವಪ್ಪೆಯಂತೆಯೇ ತಾಯಿ ಎಮಗೆ
ಕನ್ನಡತನಕ್ಕೆ ತಲೆಬಾಗುವ
ಸಾಮರಸ್ಯದಿ ಸಾಗುವ
ತುಳುವರ ಕಂಡು ಕುರುಬಿ
ತುಳಿಯದಿರಿ
ತುಳುವೇ ನಮಗೆ ಆದ್ಯ
ಜೊತೆಗೆ ಕನ್ನಡವೂ ವೇದ್ಯ
ಈ ಸಮನ್ವಯ ತುಳುವರಿಗೆ ಮಾತ್ರ ಸಾಧ್ಯ

ಅಭ್ಯುದಯ
ಪ್ರಥಮ ಬಿ. ಎ

## ಹಸಿವು



ಉರಿವ ಜ್ವಾಲೆಗೆ ಸುಡುವ ಹಸಿವು
ಬೆಳೆವ ಪ್ರತಿಭೆಗೆ ಹೆಸರಿನ ಹಸಿವು
ಬಡವನಿಗೆ ಅನ್ನದ ಹಸಿವು
ಸಿರಿವಂತನಿಗೆ ಅದು ಕಾಲ ಕಸವು
ಇದ್ದವನಿಗೇ ಎಲ್ಲ ಇಲ್ಲದವನಿಗೆ
ಏನಿಲ್ಲ
ಹಸಿವು ನೀಗಿಸಲು ಯಾರಿಂದಲೂ
ಆಗಿಲ್ಲ



ಅಮಾನಿತರಿಗೆ ದ್ವೇಶದ ಹಸಿವು
ಸನ್ಮಾನಿತರಿಗೆ ಪ್ರತಿಭೆಯ ಹಸಿವು
ಕಣ್ಣಿಗೆ ಕಾಣದ ಹಸಿವು ನೂರು
ಕಾಣುವ ಹಸಿವು ನೀಗಿಸುವರಾರು?
ಇದಕ್ಕೆ ಯಾರಾದರೂ ಕೊಡುವೀರಾ
ಸುಳಿವು
ನನ್ನದೊಂದಿದೆ ದೊಡ್ಡ ಕನಸು
ನಮ್ಮೆಲ್ಲರಿಗೂ ಇರುವುದು ಅದೊಂದೇ ಹಸಿವು

ಚೆಲುವಮ್ಮ
ಪ್ರಥಮ ಬಿ.ಎ

## ತುಳು ತಿಂಗಳು

| | |
|---|---|
| ಪಗ್ಗು | – ಎಪ್ರಿಲ್– ಮೇ |
| ಬೇಶ | – ಮೇ–ಜೂನ್ |
| ಕಾರ್ತೆಲ್ | –ಜೂನ್–ಜುಲಾಯಿ |
| ಆಟಿ | –ಜುಲಾಯಿ–ಆಗಸ್ಟ್ |
| ಸೋಣ | –ಆಗಸ್ಟ್–ಸೆಪ್ಟೆಂಬರ್ |
| ನಿರ್ನಾಲ್ | –ಸೆಪ್ಟೆಂಬರ್–ಅಕ್ಟೋಬರ್ |
| ಬೊಂತೆಲ್ | –ಅಕ್ಟೋಬರ್–ನವಂಬರ್ |
| ಜಾರ್ದೆ | –ನವಂಬರ್–ಡಿಸೆಂಬರ್ |
| ಪೆರಾರ್ದೆ | –ಡಿಸೆಂಬರ್–ಜನವರಿ |
| ಪುಯಿಂತೆಲ್ [ಪೊನ್ನಿ] | –ಜನವರಿ–ಫೆಬ್ರವರಿ |
| ಮಾಯಿ | –ಫೆಬ್ರವರಿ–ಮಾರ್ಚ್ |
| ಸುಗ್ಗಿ | –ಮಾರ್ಚ್–ಎಪ್ರಿಲ್ |

– ಸಂಗ್ರಹ: ಕಾವ್ಯಶ್ರೀ.ಕೆ
ತೃತೀಯ ಬಿ.ಎ

## ತುಳುನಾಡಿನ ಪ್ರಸಿದ್ಧ ದೇವಾಲಯಗಳು.

೧. ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನ, ಮಂಗಳೂರು.
೨. ಕದ್ರಿ ಮಂಜುನಾಥೇಶ್ವರ ದೇವಸ್ಥಾನ, ಮಂಗಳೂರು.
೩. ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನ.
೪. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ.
೫. ಸೌತಡ್ಕ ಶ್ರೀ ಮಹಾಗಣಪತಿ ದೇವಾಸ್ಥಾನ, ಕೊಕ್ಕಡ.
೬. ಶ್ರೀ ವೈದ್ಯನಾಥೇಶ್ವರ ದೇವಾಸ್ಥಾನ, ಕೊಕ್ಕಡ.
೭. ಶಿಶಿಲೇಶ್ವರ ದೇವಸ್ಥಾನ, ಶಿಶಿಲ.
೮. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಟೀಲು.
೯. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮುಲ್ಕಿ, ಮಂಗಳೂರು.
೧೦. ಶ್ರೀ ರಾಜ ರಾಜೇಶ್ವರಿ ದೇವಸ್ಥಾನ ಪೊಳಲಿ, ಬಂಟ್ವಾಳ.
೧೧. ಮಹತೋಭಾರ ಶ್ರೀ ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು.
೧೨. ಮಹತೋಭಾರ ಶ್ರೀ ಕಾರಿಂಜೇಶ್ವರ ದೇವಸ್ಥಾನ, ಬಂಟ್ವಾಳ.
೧೩. ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನ, ಪಾಣೆಮಂಗಳೂರು, ಬಂಟ್ವಾಳ.

